ಒಳಗಾಗಿದ್ದಾರೆ. ಆದರೆ ಈ ಸಂಖ್ಯೆ ಇನ್ನೂ ಹೆಚ್ಚಿರಬಹುದು ಎಂದು ಊಹಿಸಲಾಗಿದೆ. ಜೊತೆಗೆ ಮುಂದುವರೆಯುತ್ತಿರುವ ಹಾಗೂ ಹಿಂದುಳಿದ ದೇಶಗಳಲ್ಲಿ ಈ ಕ್ಯಾನ್ಸರ್ ಹೆಚ್ಚು. ಭಾರತದಲ್ಲಿ ಮೂರನೇ ಅತಿ ಮುಖ್ಯ ಕ್ಯಾನ್ಸರ್ ಎಂದೂ ಗುರುತಿಸಲಾಗಿದೆ.

## ಏನಿದು ಗರ್ಭಕಂಠ ಕ್ಯಾನ್ಸರ್?

ಇದು ಮಹಿಳೆಯ ಗರ್ಭಕೊರಳಿನಲ್ಲಿ ಉಂಟಾಗುವ ಕ್ಯಾನ್ಸರ್. ಇದನ್ನು ಪ್ರಾರಂಭದ ಹಂತದಲ್ಲೇ ಗುರುತಿಸಿದರೆ ಬೇಗನೆ ಸಂಪೂರ್ಣವಾಗಿ ಗುಣಪಡಿಸಬಹುದು. ಈ ಕ್ಯಾನ್ಸರ್‌ನಲ್ಲಿ ಒಟ್ಟು ನಾಲ್ಕು ಹಂತಗಳಿದ್ದು, ಒಂದು ವೇಳೆ ಕ್ಯಾನ್ಸರ್ ಎರಡನೇ ಹಂತ ತಲುಪಿದರೂ ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಹುದು. ಮೂರನೇ ಹಂತದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚು ಇರುವ ಮಹಿಳೆಯರನ್ನು ಮತ್ತು ಚಿಕಿತ್ಸೆಗೆ ಸರಿಯಾಗಿ ಸ್ಪಂದಿಸುವ ಮಹಿಳೆಯರನ್ನು ಕಾಪಾಡಲು ಸಾಧ್ಯ. ಆದರೆ ನಾಲ್ಕನೇ ಹಂತ ತಲುಪಿದರೆ ಜೀವ ಉಳಿಸುವ ಕೆಲಸ ಸುಲಭದ ಮಾತಲ್ಲ.

‘ಗರ್ಭ ಕೊರಳಿನ ಕ್ಯಾನ್ಸರ್‌ನ ಲಕ್ಷಣಗಳನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಗರ್ಭಕಂಠದಲ್ಲಿ ರಕ್ತಸ್ರಾವವಾಗುವುದು, ಗರ್ಭಾಶಯದ ಕೊರಳಿನಲ್ಲಿ ಅತಿಯಾದ ನೋವು, ಮುಟ್ಟಿನ ಸಮಯ ಹೊರತು ಬೇರೆ ಸಮಯದಲ್ಲೂ ರಕ್ತಸ್ರಾವವಾಗುವುದು, ಮುಟ್ಟಿನ ದಿನಗಳಲ್ಲಿ ಅತೀ ಹೆಚ್ಚು ರಕ್ತಸ್ರಾವವಾಗುವುದು, ಬಿಳಿಮುಟ್ಟಿನ ಅಧಿಕ ಸ್ರಾವ, (ವೈಟ್ ಡಿಸ್ಚಾರ್ಜ್), ಲೈಂಗಿಕ ಕ್ರಿಯೆಯ ಬಳಿಕ ರಕ್ತಸ್ರಾವ ಆಗುವುದು, ಯೋನಿಯಲ್ಲಿ ವೈರಸ್ ಸೋಂಕು, ವಿಪರೀತ ಬಳಲಿಕೆ ಇದರ ಲಕ್ಷಣಗಳು’ ಎನ್ನುತ್ತಾರೆ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ತಜ್ಞರಾಗಿರುವ ಡಾ. ವಿವೇಕ್ ಬೆಳತ್ತೂರು.

‘ಬೇರೆ ಬೇರೆ ಮಹಿಳೆಯರಲ್ಲಿ ಕ್ಯಾನ್ಸರ್ ಲಕ್ಷಣಗಳೂ ಭಿನ್ನವಾಗಬಹುದು’ ಎನ್ನುವ ಈ ವೈದ್ಯರು, ‘ಋತುಚಕ್ರದ ಮಧ್ಯೆ ಹಾಗೂ ಲೈಂಗಿಕ ಕ್ರಿಯೆಯ ನಂತರ ಅತಿಯಾದ ರಕ್ತಸ್ರಾವ, ದುರ್ವಾಸನೆಯಿಂದ ಕೂಡಿದ ಯೋನಿ ಸ್ರಾವ, ಬೆನ್ನು ಅಥವಾ ಹೊಟ್ಟೆನೋವು ಕೂಡ ಇದರ ಲಕ್ಷಣಗಳೇ ಎಂದು ಪಟ್ಟಿ ಮಾಡುತ್ತಾರೆ. ಆದರೆ ಕೆಲವೊಮ್ಮೆ ಈ ಯಾವುದೇ ಲಕ್ಷಣ ಕಾಣಿಸದೇ ಇರಬಹುದು. ಕ್ಯಾನ್ಸರ್ ಕೊನೆಯ ಹಂತ ತಲುಪುವವರೆಗೂ ಮಹಿಳೆಗೆ ಗೊತ್ತಾಗದೇ ಇರಬಹುದು. ಹೀಗಾಗಿ ಹದಿಹರೆಯದಲ್ಲೇ ಹುಡುಗಿಯರು ಎಚ್‌ಪಿವಿ ಲಸಿಕೆಯನ್ನು ಪಡೆಯುವುದು ಮತ್ತು ನಿಯಮಿತವಾಗಿ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದು ಅಪಾಯ ತಪ್ಪಿಸಲು ಇರುವ ಸುಲಭದ ದಾರಿ’ ಎಂದು ವಿವರಿಸುತ್ತಾರೆ ಅವರು.



ಕ್ಯಾನ್ಸರ್ ಗುಣಲಕ್ಷಣ ಕಂಡುಬಂದ ಕೂಡಲೇ ಆದಷ್ಟು ಬೇಗ ಮಹಿಳೆಯರು ಗರ್ಭಕಂಠ ಸ್ಕ್ರೀನಿಂಗ್ ಮಾಡಿಸಿಕೊಳ್ಳಬೇಕು.

**-ಡಾ. ವಿವೇಕ್ ಬೆಳತ್ತೂರು,**

ಕ್ಯಾನ್ಸರ್ ತಜ್ಞರು

## ಲಸಿಕೆ ಇದೆ!

ಗರ್ಭಕಂಠ ಕ್ಯಾನ್ಸರ್ ತಡೆಗೆ ಇದೀಗ ಉತ್ತಮ ಲಸಿಕೆ ಲಭ್ಯವಿದೆ. 11 ವರ್ಷ ಮೇಲ್ಪಟ್ಟ ಹಾಗೂ 25 ವರ್ಷ ಒಳಗಿನವರೆಗೆ ಈ ಲಸಿಕೆ ನೀಡಲಾಗುವುದು. 11 ರಿಂದ 15 ವರ್ಷ ವಯಸ್ಸಿನ ಮಕ್ಕಳಿಗೆ 2 ಡೋಸ್ ಹಾಗೂ 15ರಿಂದ 25 ವರ್ಷದವರಿಗೆ 3 ಡೋಸ್ ಲಸಿಕೆ ನೀಡಲಾಗುವುದು. 30 ವರ್ಷ ಮೇಲ್ಪಟ್ಟವರಿಗೆ ಈ ಲಸಿಕೆ ಹೆಚ್ಚು ಪರಿಣಾಮಕಾರಿಯಲ್ಲ. ಹೀಗಾಗಿ ಮೂವತ್ತು ವರ್ಷ ದಾಟಿದ ಮಹಿಳೆಯರು ಆಗಾಗ ಗರ್ಭಕಂಠ ಕ್ಯಾನ್ಸರ್ ಪರೀಕ್ಷೆ ಮಾಡಿಸಿಕೊಳ್ಳುತ್ತಿರಬೇಕಾದ ಅನಿವಾರ್ಯತೆ ಇದೆ.

ಈ ಲಸಿಕೆಗಳು ಕ್ಯಾನ್ಸರ್‌ಗೆ ಸಂಬಂಧಿಸಿದ ಎಚ್‌ಪಿವಿ ಸೋಂಕಿನಿಂದ ರಕ್ಷಣೆ ನೀಡುತ್ತವೆ. ಆದರೆ ಈ ಲಸಿಕೆಗಳು ಎಚ್‌ಪಿವಿ ಸೋಂಕನ್ನು ತಡೆಗಟ್ಟುವಲ್ಲಿ ಕಾರ್ಯನಿರ್ವಹಣೆ ಮಾಡುತ್ತವೆಯೇ ಹೊರತು ಇರುವ ಸೋಂಕಿಗೆ ಚಿಕಿತ್ಸೆಯನ್ನು ನೀಡುವುದಿಲ್ಲ. ಅಲ್ಲದೆ ಪಾಪ್ ಸ್ಮಿಯರ್ ಪರೀಕ್ಷೆಯನ್ನು 21 ವರ್ಷಕ್ಕಿಂತ ಮೇಲ್ಪಟ್ಟ, ಲೈಂಗಿಕವಾಗಿ ಸಕ್ರಿಯವಾಗಿ ಇರುವ ಮಹಿಳೆಯರಲ್ಲಿ ಪ್ರತಿ ಮೂರು ವರ್ಷಗಳಿಗೆ ಒಮ್ಮೆ 65 ವರ್ಷ ವಯಸ್ಸಿನವರೆಗೂ ಮಾಡಿಸಬೇಕಾಗುತ್ತದೆ.




## ಪತ್ತೆ ಹಚ್ಚುವುದು ಹೇಗೆ?

ಗರ್ಭಕೊರಳಿನ ಕ್ಯಾನ್ಸರ್ ಅನ್ನು ವಿವಿಧ ಪರೀಕ್ಷೆಗಳ ಮೂಲಕ ಪತ್ತೆ ಹಚ್ಚಬಹುದು. ಸಾಮಾನ್ಯವಾಗಿ 21 ವರ್ಷ ಮೇಲ್ಪಟ್ಟ ಹಾಗೂ 30 ವರ್ಷದೊಳಗಿನ ಮಹಿಳೆಯರು ಎಚ್‌ಪಿವಿ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ತಮಗೆ ಗರ್ಭಕಂಠ ಕ್ಯಾನ್ಸರ್ ಇದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಈ ಪರೀಕ್ಷೆಯನ್ನು ವರ್ಷಕ್ಕೆ ಒಮ್ಮೆ ಅಥವಾ ಮೂರು ವರ್ಷಕ್ಕೆ ಒಮ್ಮೆ ಮಾಡಿಸಿಕೊಳ್ಳಬಹುದು. ಎಂಆರ್‌ಐ ಅಥವಾ ಸಿಟಿ ಸ್ಕ್ಯಾನ್ ಮೂಲಕವೂ ಈ ಕ್ಯಾನ್ಸರ್‌ನನ್ನು ದೃಢಪಡಿಸಿಕೊಳ್ಳಬಹುದು. ಅಲ್ಲದೆ ಮಹಿಳೆಯರು ಪಾಪ್ ಸ್ಮಿಯರ್ ಟೆಸ್ಟ್ ಹಾಗೂ ಎಚ್‌ಪಿವಿಡಿಎನ್‌ಎ ಪರೀಕ್ಷೆಗಳಿಗೂ ಒಳಗಾಗಬೇಕಾಗುತ್ತದೆ.

## ಚಿಕಿತ್ಸೆ ಏನು?

‘ಪ್ರಾರಂಭದಲ್ಲಿ ಈ ಕ್ಯಾನ್ಸರ್ ಪತ್ತೆಯಾದಲ್ಲಿ ಗರ್ಭಕಂಠ ತೆಗೆಯುವ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಕ್ಯಾನ್ಸರ್ ಅನ್ನು ಗುಣಪಡಿಸಬಹುದು. ಎರಡರಿಂದ ಮೂರನೇ ಹಂತದವರೆಗೂ ಕ್ಯಾನ್ಸರ್ ತಲುಪಿದ್ದರೆ ಇವರಿಗೆ ರೇಡಿಯೇಷನ್, ಕಿಮೋಥೆರಪಿ ಕಾಂಬಿನೇಷನ್ ಚಿಕಿತ್ಸೆ ನೀಡುವುದರಿಂದ ಕ್ಯಾನ್ಸರ್ ಗುಣಮುಖವಾಗಲು ಸಾಧ್ಯ. ನಾಲ್ಕನೇ ಹಂತಕ್ಕೆ ತಲುಪಿದಾಗ ಆ ಸಂದರ್ಭದೊಳಗಾಗಲೇ ಈ ಕ್ಯಾನ್ಸರ್ ಗರ್ಭಕಂಠದ ಜೊತೆಗೆ ಇತರ ಅಂಗಾಂಗಗಳಿಗೂ ಪಸರಿಸಿರುತ್ತದೆ. ಹೀಗಾಗಿ ಈ ಹಂತದಲ್ಲಿ ಯಾವುದೇ ಚಿಕಿತ್ಸೆ ಕೆಲಸ ಮಾಡುವುದಿಲ್ಲ. ಆದರೆ, ಈ ಕ್ಯಾನ್ಸರ್ ಇನ್ನಷ್ಟು ಅಂಗಗಳಿಗೆ ಹರಡುವುದನ್ನು ತಡೆಯಬಹುದಷ್ಟೆ. ಹೀಗಾಗಿ ಈ ಕ್ಯಾನ್ಸರ್ ಗುಣಲಕ್ಷಣ ಕಂಡು ಬಂದ ಕೂಡಲೇ ಎಲ್ಲ ಮಹಿಳೆಯರು ಗರ್ಭಕಂಠ ಕ್ಯಾನ್ಸರ್ ಸ್ಕ್ರೀನಿಂಗ್ ಮಾಡಿಸಿಕೊಳ್ಳುವುದು ಅನಿವಾರ್ಯ’ ಎಂದು ಸಲಹೆ ಮಾಡುತ್ತಾರೆ ಡಾ. ವಿವೇಕ್ ಬೆಳತ್ತೂರು.

‘ಪ್ರಿವೆನ್ಷನ್ ಈಸ್ ಬೆಟರ್ ದೆನ್ ಕ್ಯೂರ್’ ಎಂಬ ಮಾತಿದೆ. ಯಾವ ಕ್ಯಾನ್ಸರ್ ಬರಲಿ, ಇತರ ಯಾವುದೇ ರೋಗಗಳೇ ಬರಲಿ, ಸೂಕ್ತ ಮುನ್ನೆಚ್ಚರಿಕೆ ವಹಿಸಲೇಬೇಕು. ನಿಯಮಿತ ವ್ಯಾಯಾಮ, ನಡಿಗೆ, ಪೋಷಕಾಂಶಯುಕ್ತ ಆಹಾರ ಸೇವನೆ, ಧೂಮಪಾನ, ಮದ್ಯಪಾನ ತ್ಯಜಿಸುವುದು, ಉತ್ತಮ ಹವ್ಯಾಸ ಬೆಳೆಸಿಕೊಳ್ಳುವ ಮೂಲಕ ಕ್ಯಾನ್ಸರ್‌ನ ಅಪಾಯದಿಂದ ಪಾರಾಗಲು ಸಾಧ್ಯ.

ಪ್ರತಿಕ್ರಿಯಿಸಿ: feedback@sudha.co.in